ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 7th March 1973. Phalguna 16, 1894 S. E.

The House met in the Assembly Chamber, Vidhana Soudha, at One of the Clock.

MADAM SPEAKER. (SMT K.S. NAGARATHNAMMA) in the chair,

Starred Questions
To which oral Answers were given

RECRUITMENT TO POSTS IN MUZRAI INSTITUTIONS

47 Sri K. SIDDAIAH (Stanthemarahalli)—Will the Minister for Revenue be pleased to state—

(*a*) The classes of temples or institutions that exist in the State under Muzrai Department and the mode of recruitment to all those classes or category of posts in these institutions and temples;—

(*b*) The name of the recruiting authority and the syallabus prescribed for these posts or appointments stated above.

(*c*) Whether there are any reservation of posts in favour of Backward Classes, if so, the names of various classes and the category of posts reserved for them,

(*d*) If not, the reasons for not providing for any reservation in recruitment ?

Sri N. HUTCHAMASTHY GOWDA. (Minister for Revenue.)—

(*a*) 1 (*a*) Scheduled Institutions
(*b*) Major Muzrai Institutions
(*c*) Minor Muzrai Institutions
(*d*) Village Muzrai Institutions (Old Mysore area)

2 (*e*) Listed Institutions
(*f*) Non-listed Institutions (Madras area)
(*g*) Institutions under direct management of Government
(*h*) Institutions managed by Mutavallis (Hydrabad area

(SRI N. HUTCHMASTI GOWDA)

The mode of recruitment to all the categaries of posts in those institutions is by direct recruitment, except in the case of hereditary posts.

(*b*) In Old Mysore area, the Commissioner for Endowments, Bangalore, the Deputy Commissioner, Assistant Commissioner and the Tahsildars are the recruiting authorities in respect of the posts in the institutions.

In Madras area the trustees and ex-officers in respect of temple staff and the Commisioner in respect of Executive Officer are the recruiting authorities.

In Coorg area, Coorg Temple Funds Management Committee is the recruiting authority,

(*c*) No.

(*d*) As per the existing rules there are no provisions for reservations of posts in favour of Backward Classes.

ಶ್ರೀ ಕೆ. ಸಿದ್ದಯ್ಯ-ಸ್ವಾಮಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಮುಜರಾಯಿ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗಾಗಿ ಯಾವ ಹುದ್ದೆಗಳನ್ನು ಮೀಸಲಾಗಿಟ್ಟಿಲ್ಲ ಎಂದು ಹೇಳಿದ್ದಿರಿ, ಕಳೆದ ೫೫ ವರ್ಷಗಳಿಂದ ಈ ಇಲಾಖೆಯಲ್ಲಿ ಅವರಿಗೆ ಏತಕ್ಕೋಸ್ಕರ ಹುದ್ದೆಗಳನ್ನು ಮೀಸಲಾಗಿಡಲಿಲ್ಲ. ಇನ್ನು ಮುಂದಾದರೂ ಅದನ್ನು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ – ಈಗ ಇರತಕ್ಕ ಕಾನೂನು ಪ್ರಕಾರ ರಿಜರ್ವೇಷನ್ ಇಲ್ಲ. ಈಗ ಮಾನ್ಯ ಸದಸ್ಯರು ಆ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಕೆ. ಸಿದ್ದಯ್ಯ —(ಆ) ಪ್ರಶ್ನೆಗೆ ಉತ್ತರವಾಗಿ ಅನುಪಂಶಿಕ ಹುದ್ದೆಗಳನ್ನುಳಿದು ಸದರಿ ಸಂಸ್ಥೆಗಳಲ್ಲಿನ ಎಲ್ಲಾ ದರ್ಜೆಯ ಹುದ್ದೆಗಳಿಗೂ ನೇರವಾಗಿ ನೇಮಕ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ ಅನುವಂಶಿಕ ಹುದ್ದೆಗಳನ್ನು ಅಬಾಲಿಷ್ ಮಾಡಿ ಎಲ್ಲಾ ಹುದ್ದೆಗಳಿಗೂ ಡೈರೆಕ್ಟ್ ರೆಕ್ರೂಟ್ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅನುವಂಶಿಕವಾಗಿ ಬಂದಂತಹ ಯಾವ ಹುದ್ದೆಗಳನ್ನೂ ಇಟ್ಟುಕೊಳ್ಳುವುದಿಲ್ಲ ಎನ್ನುವ ನೀತಿಯನ್ನು ಒಪ್ಪಿಕೊಂಡಮೇಲೆ ಅನುವಂಶಿಕ ಹುದ್ದೆಗಳನ್ನು ಇಟ್ಟುಕೊಳ್ಳುವ ತಕ್ಕ ಪದ್ಧತಿ ಇರುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಹಿಂದುಳಿದ ವರ್ಗದವರಿಗೆ ಹುದ್ದೆಗಳನ್ನು ಮೀಸಲಾಗಿಟ್ಟಿಲ್ಲ ಎಂದು ಹೇಳಿದ್ದಾರೆ. ಇದು ರಾಜ್ಯಾಂಗ ನೀತಿಗೆ ವಿರೋಧವಾಗಿದೆ. ಆದ್ದರಿಂದ ಈ ವಿರೋಧವಾಗಿರತಕ್ಕ ತತ್ವವನ್ನು ಕೈಬಿಡಲೇ ರದ್ದುಮಾಡಿ ರಾಜ್ಯದಲ್ಲಿರತಕ್ಕ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಈ ಇಲಾಖೆಯಲ್ಲೂ ಎಲ್ಲಾ ದರ್ಜೆಯ ಹುದ್ದೆಗಳೂ ದೊರಕತಕ್ಕಂಥಾ ಅವಕಾಶ ನೀಡುವ ನೀತಿಯನ್ನು ಜಾರಿಗೆ ತರುತ್ತೀರಾ ?

†ಶ್ರೀ ಎನ್. ಹುಚ್ಚಮಾಸ್ತಿ ಗೌಡ. ಈಗಾಗಲೇ ಆ ಬಗ್ಗೆ ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ದೇವಸ್ಥಾನದಲ್ಲಿ ಆರ್ಚಕರ ಕೆಲಸಕ್ಕೆ ನೇಮಿಸಲು ಅರ್ಹತೆಯನ್ನು ನಿಗದಿ ಮಾಡಿದ್ದೀರಾ ? ಒಂದುವೇಳೆ ಅದನ್ನು ನಿಗದಿ ಮಾಡದಿದ್ದರೆ ಅದನ್ನು ಮಾಡುತ್ತೀರಾ ?

Astriks indicat that remarks or speeches have not been revieed by the member concerned.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೂಜಾರಿ ಆಗಬೇಕಾದರೆ ಆಗಮಶಾಸ್ತ್ರ ಗೊತ್ತಿರಬೇಕು ಎಂದು ಇದೆ. ಹಾಗೆ ಹೇಳಿದ್ದರೂ ಕೂಡ ಅನೇಕ ಕಡೆ ಅದು ಬಳಕೆಯಲಿಲ್ಲ ಇಲ್ಲ ಎಂಬುದು ಗೊತ್ತಿದೆ. ಕೆಲವು ಸಂದರ್ಭಗಳಲ್ಲಿ ಆಗಮ ಶಾಸ್ತ್ರವನ್ನು ಬಲ್ಲವರನ್ನೆ ನೇಮಿಸಬೇಕು ಎಂದೂ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡರೆ ಬೇರೆಯವರನ್ನು ನೇಮಿಸುವುದಿಲ್ಲ ಎಂದು ಹೇಳಿದರೆ ಆಗ ಎಷ್ಟೋ ದೇವಸ್ಥಾನಗಳಲ್ಲಿ ಪೂಜಾರಿಗಳಿಗೆ ಕೊಡಬೇಕಾದಂತಹ ಸಂಬಳಸಾರಿಗೆಯನ್ನೂ ಕೊಡುವುದಕ್ಕೆ ಸಾಧ್ಯವಿಲ್ಲದೆ ದೇವರ ಪೂಜೆ ನಡೆಯುವುದು ಕಷ್ಟ ಎನ್ನುವುದು ಅನುಭವಕ್ಕೆ ಬಂದಿರುವ ವಿಷಯ.

ಶ್ರೀ ಎಂ. ಬಿ. ರಾಮಸ್ವಾಮಿ,—ಡಿನಾಮಿನೇಷನಲ್ ಟೆಂಪಲ್ಸ್ ಇನ್‌ಸ್ಟಿಟ್ಯೂಷನ್‌ಗಳು ಯಾವೆ ಅವುಗಳನ್ನು ಸರ್ಕಾರದ ಕಂಟ್ರೋಲಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಅಂಥಾ ಇನ್‌ಸ್ಟಿಟ್ಯೂಷನ್‌ಗಳಿಗೆ ಕೋಟ್ಯಾಂತರ ರೂಪಾಯಿಗಳ ಆದಾಯ ಇದೆ, ಆದ್ದರಿಂದ ಅದನ್ನು ಸರ್ಕಾರದ ಕಂಟ್ರೋಲಿಗೆ ತೆಗೆದುಕೊಂಡರೆ ಅಲ್ಲಿ ಅಪವ್ಯಯವಾಗುತ್ತಿರುವ ಹಣವನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಆ ತರಹ ಯಾವುದೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ಮುಜರಾಯಿ ಇಲಾಖೆಗೆ ಸೇರಿದ ಹಾಗೆ ಹಳೆಯ ನೇಮಕಗಳನ್ನು ಮಾಡುವುದಕ್ಕೆ ಮೈಸೂರಿನಲ್ಲಿ ಒಂದು ತರಹ ರೆಕ್ರೂಟ್‌ಮೆಂಟ್ ರೂಲ್ಸ್, ಮದ್ರಾಸ್ ಪ್ರದೇಶದಲ್ಲಿ ಒಂದು ತರಹ ರೆಕ್ರೂಟ್‌ಮೆಂಟ್ ರೂಲ್ಸ್ ಕೊಡಗು ಪ್ರದೇಶಕ್ಕೆ ಒಂದು ತರಹ ರೆಕ್ರೂಟ್‌ಮೆಂಟ್ ರೂಲ್ಸ್ ಮತ್ತು ಹೈದರಾಬಾದ್ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಒಂದು ತರಹ ರೆಕ್ರೂಟ್‌ಮೆಂಟ್ ರೂಲ್ಸ್ ಇದೆ. ಆದ್ದರಿಂದ ಎಲ್ಲಾ ಪ್ರದೇಶಗಳಗೂ ಅನ್ವಯವಾಗುವ ಹಾಗೆ ಏಕರೂಪವಾದ ರೆಕ್ರೂಟ್‌ಮೆಂಟಿನ ರೂಲ್ಸ್ ಅನ್ನು ತರುವ ಬಗ್ಗೆ ಸರ್ಕಾರದವರು ಯೋಜನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಬಗ್ಗೆ ಹಿಂದೆಯೇ ಏಕರೂಪವಾದ ಕಾನೂನನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ನಡೆದಿದೆ. ಆದರೆ ಅದು ಈಗ ಲ್ಯಾಪ್ಸ್ ಆಗಿರುವುದರಿಂದ ಮತ್ತೆ ಏಕರೂಪವಾದ ಕಾನೂನನ್ನು ತರುವುದಕ್ಕೆ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ·—ಹಿಂದುಳಿದ ವರ್ಗದವರಿಗಾಗಿ ಈ ಇಲಾಖೆಯಲ್ಲಿ ಹುದ್ದೆಗಳನ್ನು ಮೀಸಲಾಗಿಟ್ಟಿಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಇದರಲ್ಲಿ ಕೊಡುವುದಕ್ಕೆ ಅವಕಾಶ ವಿಲ್ಲ ಎಂದು ತಮ್ಮ ಊಹೆಯೇ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಊಹೆಯ ಪ್ರಶ್ನೆಯಲ್ಲ. ಈಗಾಗಲೆ ಅನೇಕ ಸೆಕ್ಯೂಲರ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ, ಪಿಲೇಜ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅನೇಕ ಬ್ಯಾಕ್‌ವರ್ಡ್ ಕ್ಲಾಸಿನವರು ಇದ್ದಾರೆ. ಆದರೆ ರಿಜರ್ವೇಷನ್ ಇಷ್ಟೇ ಇಡಬೇಕು ಎಂದು ಕಾನೂನಿನಲ್ಲಿ ಇಲ್ಲ.

ಶ್ರೀ ಕೆ ಸಿದ್ದಯ್ಯ.—ತಾವು ಯೂನಿಫಾರಂ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತೇವೆ ಎಂದು ಹೇಳಿದ್ದಿರಿ ಇದರ ಜೊತೆಗೆ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ ಕಮಿಟಿ ಇರುವ ಹಾಗೆ ಈ ಮುಜರಾಯಿ ಡಿಪಾರ್ಟ್‌ಮೆಂಟಿಗೂ ಒಂದು ರೆಕ್ರೂಟ್‌ಮೆಂಟ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಬೇಗ ಜಾರಿಗೆ ತರುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಏಕರೂಪವಾದ ಕಾನೂನನ್ನು ತರತಕ್ಕಂಥಾ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ಆಲೋಚನೆ ಮಾಡುತ್ತೇವೆ.

LEGAL ASSISTANCE FOR POOR TENANTS

117. SRI B. G. BANAKAR (Hirekerur).—Will the Minister for Revenue be pleased to state :—

(*a*) the total number of cases relating to lands pending before the Land Tribunals in the State as on the latest available date ;

(*b*) whether the Government has given legal assistance to the poor tenants ;

(*c*) if so, the number of poor tenants to whom the Government has given legal assistance during the last 3 years ?